ಡಿ.ಡಬ್ಲ್ಯು.1

ದಿನಾಂಕಃ 19-01-2026 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಪಾಟಿಸವಾಲುಃ** ಫಿರ್ಯಾದಿದಾರ ಪರ ಶ್ರೀ ಬಿ.ಎಚ್.ಜಿ. ವಕೀಲರಿಂದಃ

ನಿ.ಪಿ.1 ಮತ್ತು 2 ನನಗೆ ಸೇರಿದ ಚೆಕ್ಕುಗಳಲ್ಲ. ನಿ.ಪಿ.1(ಎ) ಮತ್ತು 2(ಎ) ನನ್ನ ಸಹಿಗಳಲ್ಲ. ನಾನು ಕುಷ್ಟಗಿ ತಾಲೂಕಿನ ಹನಮನಾಗ ಗ್ರಾಮದ ನಿವಾಸಿಯಾಗಿದ್ದು, ಗುಡ್ಡದ ದೇವಲಾಪುರ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತೇನೆ. ಫಿರ್ಯಾದಿ ನೀಡಿದ ನೋಟಿಸನ್ನು ನಾನು ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಸ್ವೀಕರಿಸಿರುತ್ತೇನೆ. ಫಿರ್ಯಾದಿ ನೀಡಿದ ನೋಟಿಸನ್ನು ಕುಷ್ಟಗಿ ತಾಲೂಕಿನ ಹನಮನಾಗ ಗ್ರಾಮದ ವಿಳಾಸದಲ್ಲಿ ತಿರಸ್ಕರಿಸಿರುತ್ತೇನೆ ಅಂದರೆ ಸರಿಯಲ್ಲ. ಫಿರ್ಯಾದಿ ನೀಡಿದ ನೋಟಿಸಿಗೆ ನಾನು ಉತ್ತರ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೋಟಿಸನ್ನು ಸ್ವೀಕಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.1 ಮತ್ತು 2 ನನಗೆ ಸೇರಿದ ಚೆಕ್ಕುಗಳಲ್ಲ. ನಿ.ಪಿ.1(ಎ) ಮತ್ತು 2(ಎ) ನನ್ನ ಸಹಿಗಳಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ ಅಂದರೆ ಸರಿ.

ಬಾದಾಮಿ ನ್ಯಾಯಾಲಯದಲ್ಲಿ ಪ್ರಭುಲಿಂಗ ತೆಂಗಿನಕಾಯಿ ಎಂಬ ವ್ಯಕ್ತಿ ನನ್ನ ಮೇಲೆ ಚೆಕ್ ಅಮಾನ್ಯಗೊಂಡಂದ್ದಿಕ್ಕೆ ಸಂಬಂಧಿಸಿದಂತೆ ಸಿ.ಸಿ. ನಂ. 363/2024 ನ್ನು ದಾಖಲಿಸಿರುತ್ತಾರೆ ಅಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲಿಸ ಅಧಿಕಾರಿಗಳು ನನ್ನ ಕರ್ತವ್ಯ ಸ್ಥಳದಿಂದ ನನ್ನನ್ನು ಬಂಧಿಸಿ ನ್ಯಾಯಾಲಯಕ್ಕೆ ಕರೆತಂದಿದ್ದರು ಅಂದರೆ ಸರಿ. ಸದರಿ ಪ್ರಕರಣದಲ್ಲಿ ಜಾಮೀನು ಪಡೆದಿರುತ್ತೇನೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಂಡಿರುತ್ತೇನೆ ಅಂದರೆ ಸರಿ.

ಆಕರ್ಷಣೆ ವ್ಯವಹಾರ ಅಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಶಬ್ದ ಮುದ್ರಣ ತಪ್ಪಿನಿಂದ ಆಗಿರಬಹುದು ಎಂದು ನುಡಿಯುತ್ತಾರೆ. ನನ್ನ ಮತ್ತು ಫಿರ್ಯಾದಿ ಮದ್ಯೆ ಹಣಕಾಸಿನ ವ್ಯವಹಾರ ಇತ್ತು ಅಂದರೆ ಸರಿ. ಸಾಕ್ಷಿ ಮುಂದುವರೆದು ಫಿರ್ಯಾದಿಯೊಂದಿಗೆ ನನ್ನ ಅಣ್ಣನ ಕೃಷಿ ವ್ಯವಹಾರ ಇತ್ತು ಮತ್ತು ಫಿರ್ಯಾದಿ ಬಡ್ಡಿ ವ್ಯವಹಾರ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಸದರಿ ವಿಷಯ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ ಅಂದರೆ ಸರಿ. ಫಿರ್ಯಾದಿಯೊಂದಿಗೆ ಇದ್ದ ಹಣದ ವ್ಯವಹಾರಕ್ಕಾಗಿ ಫಿರ್ಯಾದಿಗೆ ನಿ.ಪಿ.1 ಮತ್ತು 2 ನ್ನು ನೀಡಿರುತ್ತೇನೆ ಅಂದರೆ ಸಾಕ್ಷಿ ನಿ.ಪಿ.1 ಮತ್ತು 2 ನ್ನು ನಾನು ನನ್ನ ಅಣ್ಣನಿಗೆ ನೀಡಿದ್ದು ನನ್ನ ಅಣ್ಣ ನಿ.ಪಿ.1 ಮತ್ತು 2 ನ್ನು ಫಿರ್ಯಾದಿಗೆ ನೀಡಿರುತ್ತಾರೆ

ಎಂದು ನುಡಿಯುತ್ತಾರೆ. ಸದರಿ ವಿಷಯ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ ಅಂದರೆ ಸರಿ. 2024 ರಲ್ಲಿ ಪಿರ್ಯಾದಿ ನನಗೆ ಹಣ ವಾಪಸ ಕೇಳಿದ್ದ ಅಂದರೆ ಸರಿಯಲ್ಲ. ಸದರಿ ಹಣದ ಮರುಪಾವತಿಗಾಗಿ ನಿ.ಪಿ.1 ಮತ್ತು 2 ನ್ನು ಪಿರ್ಯಾದಿಗೆ ನೀಡಿರುತ್ತೇನೆ ಅಂದರೆ ಸರಿಯಲ್ಲ.

ಪಿರ್ಯಾದಿ ಮೀನುಸಾಕಾಣಿಕೆ ಮಾಡುತ್ತಾರೆ ಅಂದರೆ ಸರಿ. ಪಿರ್ಯಾದಿಗೆ ಕೃಷಿ ಜಮೀನು ಇರುತ್ತದೆ. ಪಿರ್ಯಾದಿಗೆ ಮೀನುಸಾಕಾಣಿಕೆ ಮತ್ತು ಕೃಷಿ ಜಮೀನಿನಿಂದ ಸಾಕಷ್ಟು ಆದಾಯ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಪಿರ್ಯಾದಿಯೊಂದಿಗೆ ಹಣದ ವ್ಯವಹಾರ ಮಾಡಿರುತ್ತೇನೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ಅಣ್ಣ ಪಿರ್ಯಾದಿಯೊಂದಿಗೆ ಹಣದ ವ್ಯವಹಾರ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ವಿಷಯ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ ಅಂದರೆ ಸರಿ. ಪಿರ್ಯಾದಿ ಆರ್ಥಿಕವಾಗಿ ಸಬಲನಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪಿರ್ಯಾದಿಯ ಪರಿಚಯ ನನಗಿರುತ್ತದೆ. ಪಿರ್ಯಾದಿ ನೀಡಿರುವ ಹಣವನ್ನು ಮುಳುಗಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

Sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಬದಾಮಿ,
ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ